# ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಬಹುಮಾನ ಯೋಜನೆ

**(ಸರ್ಕಾರಿ ಆದೇಶ ಸಂ:ಸ.ಕಾ.ಕ:223:ಪಿಹೆಚ್‌ಪಿ:98:ದಿ:31.12.1992)**

**(ಸರ್ಕಾರಿ ಆದೇಶ ಸಂ:ಮಮಅ:288:ಪಿಹೆಚ್.ಪಿ:2002 ದಿ:19.09.2002)**

(ಸರ್ಕಾರಿ ಆದೇಶ ಸಂ:ಮಮಇ:324:ಪಿಹೆಚ್‌ಪಿ:2013 ಬೆಂಗಳೂರು. ದಿ:05.02.2014
ಹಾಗೂ ತಿದ್ದುಪಡಿ ಆದೇಶ ಸಂಖ್ಯೆ:ಮಮಇ:324:ಪಿಹೆಚ್‌ಪಿ:2013 ಬೆಂಗಳೂರು ದಿ:08.05.2014)

## ಉದ್ದೇಶ

ಪಬ್ಲಿಕ್ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಿ ವಿಕಲಚೇತನ ವಿದ್ಯಾರ್ಥಿಗಳನ್ನು ಪ್ರತಿಭಾವಂತರನ್ನಾಗಿಸಿ ಸಮಾಜದ ಮುಖ್ಯವಾಹಿನಿಗೆ ತರುವುದು ಯೋಜನೆಯ ಉದ್ದೇಶವಾಗಿರುತ್ತದೆ. ಪ್ರೋತ್ಸಾಹಧನದ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ. | ತರಗತಿಗಳು | ನೀಡುತ್ತಿರುವ ಪ್ರೋತ್ಸಾಹ ಧನ |
|---|---|---|
| 1 | ಎಸ್.ಎಸ್.ಎಲ್.ಸಿ. | 3000/- |
| 2 | ಪದವಿ ಪೂರ್ವ ಶಿಕ್ಷಣ | 5000/- |
| 3 | ಪದವಿ / ಟಿ.ಸಿ.ಹೆಚ್. | 8000/- |
| 4 | ಬಿ.ಇಡಿ / ಸ್ನಾತಕೋತ್ತರ ಪದವಿ / ಎಂ.ಎ., ಎಂ.ಕಾಂ./ಎಂ.ಎಸ್ಸಿ ಹಾಗೂ ಪದವಿ ನಂತರ 2 ವರ್ಷಗಳ ಕೋರ್ಸ್‌ಗೆ. | 10000/- |
| 5 | ಕೃಷಿ ಪದವಿ / ಇಂಜಿನೀಯರಿಂಗ್ / ಪಶು ವೈದ್ಯಕೀಯ / ಎಂ.ಇಡಿ. ವೈದ್ಯಕೀಯ ಪದವಿ. | 12000/- |

## ಅರ್ಹತೆಗಳು

1. ವ್ಯಾಸಂಗ ಮಾಡುತ್ತಿರುವ ಹಾಗೂ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಯು ಶೇ.40ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರಬೇಕು ಹಾಗೂ ವೈದ್ಯಕೀಯ ಪ್ರಾಧಿಕಾರದಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರ ಪಡೆದಿರಬೇಕು.
2. ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು ಪ್ರಥಮ ಬಾರಿಗೆ ಉತ್ತೀರ್ಣರಾಗಿರಬೇಕು.
3. ಶೇ.60%ಕ್ಕಿಂತಲೂ ಹೆಚ್ಚಿನ ಅಂಕಗಳಿಸಿದ ವಿದ್ಯಾರ್ಥಿಗಳು ಮಾತ್ರ ಈ ಯೋಜನೆಗೆ ಅರ್ಹರಾಗಿರುತ್ತಾರೆ.
4. ಅರ್ಜಿಯನ್ನು ವ್ಯಾಸಂಗ ಮಾಡುತ್ತಿರುವ ಶಾಲೆ/ಕಾಲೇಜು ಮುಖ್ಯಸ್ಥರ ಮೂಲಕ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಬೇಕು.



ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳು
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ಬಾಗಲಕೋಟ